ಎಂ.ಎ. ಕುಮಾರ್, ಬೆಂಗಳೂರು

*ಗಂಟೆಗಟ್ಟಲೆ ಭಾಷಣ ಮಾಡುವ ರಾಜಕಾರಣಿಗಳು ಮನೆಯಲ್ಲಿ ಹೇಗಿರುತ್ತಾರೆ?*



ಸೈಲೆಂಟ್ ಮೋಡ್‌ನಲ್ಲಿ ಚಾರ್ಜಿಂಗ್‌ಗೆ ಹಾಕಿದ ಸೆಲ್‌ಫೋನ್‌ನಂತೆ.

ಎಸ್ಸೆನ್ಕೆ, ಕಡೂರು

*ಪುನರ್ಜನ್ಮದ ಕಥೆಗಳಲ್ಲಿ ಯಾವಾಗಲೂ ಹಿಂದಿನ ಜನ್ಮದ ತಂದೆತಾಯಿಯರು ಶ್ರೀಮಂತರೇ ಆಗಿರುತ್ತಾರಲ್ಲಾ...?*

ಸರಿಯೇ. ಪುಣ್ಯದಿಂದ ಮೋಕ್ಷ. ಪಾಪದಿಂದ ಪುನರ್ಜನ್ಮ. ಸಿರಿ ಪಾಪಕ್ಕೆ ದಾರಿ.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು

*ತಾನೇ ಬೆಳೆಸಿದ ಮರ ತನ್ನ ಮೇಲೆಯೇ ಬಿದ್ದಾಗ, ಬೀಳಿಸಿಕೊಂಡವನ ಪ್ರತಿಕ್ರಿಯೆ ಹೇಗಿರಬಹುದು ರಾಮ್‌ಜೀ?*

ತಾನೇ ಆಡಿಸಿ ಬೆಳೆಸಿದ ಅಕ್ಕನ ಮಗಳನ್ನು ಲಗ್ನವಾಗಿ ನರಳುತ್ತಿರುವ ಸೋದರಮಾವನ ಪ್ರತಿಕ್ರಿಯೆಯಂತೆಯೇ.

ಸುನಂದ, ಗೌರಿಬಿದನೂರು

*3-1/2ಮೀಟರ್ ಬಟ್ಟೆ ಗಂಡಿನ ಮೈ ಮುಚ್ಚುತ್ತದೆ. 5-1/2ಮೀಟರ್ ಸೀರೆ, 80 ಸೆ.ಮೀ. ರವಿಕೆ ತೊಟ್ಟ ಹೆಣ್ಣು ಮೈಮಾಟ ತೋರುವಳಲ್ಲಾ?*



ಉಡುಪಿನ ಹೆಸರೇ ಸೂಚಿಸುತ್ತದಲ್ಲ; ಮೂಟೆ ಮೂಟೆಯೇ, ಮಾಟ ಮಾಟವೇ, see ರೇ, ಎನ್ನುವುದೇ ಸೀರೆ.

ಬಾ.ರಂ. ಸುರೇಶ್, ಶಿವಮೊಗ್ಗ

*ಮದುವೆಯಾಗುವವರೆಗೆ ಸ್ವತಂತ್ರವಾಗಿ ಧೈರ್ಯದಿಂದಿರುವ ಗಂಡು ನಂತರ ಹೆಂಡತಿಯ ಆದೇಶದಂತೆ ನಡೆಯುವುದೇಕೆ?*

ರಿಂಗ್ ಮಾಸ್ಟರ್ ಹೇಳಿದಂತೆ ಕೇಳದಿದ್ದರೆ ಸರ್ಕಸ್ ನಡೆಯುವುದಿಲ್ಲವಲ್ಲ!

ವಾಣಿ, ಮೈಸೂರು

*ರಾತ್ರಿಯ ಸಮಯದಲ್ಲಿ ಹುಟ್ಟಿದವರಿಗೆ ಬರ್ತ್‌ಡೇ ಅನ್ನುವ ಬದಲು ಬರ್ತ್‌ನೈಟ್ ಎನ್ನುವುದು ಸರಿಯಲ್ಲವೆ?*

ಡೇ=ದಿನ; ಬರ್ತ್‌ಡೇ=ಜನ್ಮದಿನ. ದಿನ=ಹಗಲು+ರಾತ್ರಿ. ಆದ್ದರಿಂದ ನಿಮ್ಮ ತಿದ್ದುಪಡಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

ಮುರಲೀಧರ ಕುಲಕರ್ಣಿ, ಬೀದರ್

*ನನ್ನ ವಾರಭವಿಷ್ಯ, ಮಾಸಭವಿಷ್ಯ ಉತ್ತಮವಾಗಿದೆ ಎಂದು ಭವಿಷ್ಯ ಪ್ರಕಟಿಸುವ ಪತ್ರಿಕೆಗಳೇ ನನ್ನ ಲೇಖನಗಳನ್ನು ಪ್ರಕಟಿಸುತ್ತಿಲ್ಲವಲ್ಲ?*

ತಿಳಿಯಲಿಲ್ಲವೆ? ನಿಮ್ಮ ಲೇಖನ ಪ್ರಕಟಿಸಿದರೆ ನಿಮ್ಮ ಭವಿಷ್ಯಕ್ಕೆ ಸಂಚಕಾರವಿದೆ ಎಂದರ್ಥ!

ಬಿ. ಶಿವಲಿಂಗೇಗೌಡ, ಬೇವಿನಹಳ್ಳಿ

*ಹಠಮಾರಿ ಹೆಂಡತಿಗೆ ಚಟವಂತ ಗಂಡ ಸಿಕ್ಕಿದರೆ ಏನಾಗಬಹುದು...?*

ಹಠ ಮಾಡಿ ಗಂಡನ ಕೈಲಿ ವಿಮೆ ಮಾಡಿಸಿ ಆಕೆ ಬೇಗ ಶ್ರೀಮಂತಳಾಗಬಹುದು.

ಕೆ. ಸವಿತಾಕುಮಾರಿ, ಬೆಂಗಳೂರು

*ಮದುವೆ ದಿನದಂದು ವಧೂ-ವರರನ್ನು ಸಾಕ್ಷಾತ್ ಲಕ್ಷ್ಮಿ-ನಾರಾಯಣರಿಗೆ ಹೋಲಿಸಿರುವಾಗ ಅವರೇಕೆ ಅತಿಥಿಗಳಿಗೆ ನಮಿಸಬೇಕು?*

ಅತಿಥಿಗಳು ಭಕ್ತರಂತೆ. ದೇವ ಭಕ್ತಪರಾಧೀನ ಎಂದು ತೋರಿಸಿಕೊಡಲು.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಉತ್ತಮ ಗೆಳೆತನದ ಗುಟ್ಟೇನು?*

ಹಿಡಿ ಅವಲಕ್ಕಿ ಪಡೆದು ಮುಡಿ ನೆಮ್ಮದಿ ನೀಡುವುದು.

ಎಂ.ಜಿ. ಚನ್ನಪ್ಪಸ್ವಾಮಿ, ಭದ್ರಾವತಿ

*ಮೊದಲ ರಾತ್ರಿಯಂದು ಗಂಡ ಹಾಲು ಕುಡಿದು ಇನ್ನರ್ಧ ಎಂಜಲನ್ನು ಹೆಂಡತಿಗೆ ಬಿಟ್ಟುಕೊಡಲು ಕಾರಣವೇನು?*

ತನ್ನ ಪಾಲಿನ ಹಾಲು ನೀಡಲಿಲ್ಲ; ಇದು ಹಕ್ಕುಚ್ಯುತಿ, ಮಾನಸಿಕ ಕಿರುಕುಳ ಎಂದು ಕೇಸ್ ಹಾಕಿಯಾಳೆಂಬ ಭಯ.

ಶಿವಮೊಗ್ಗ ರಮೇಶ್, ಮೈಸೂರು

*ಪ್ರೀತಿ ಯಾವುದಕ್ಕೆ ಸಂಬಂಧಿಸಿದ್ದು-ಮನಸ್ಸಿಗೋ, ದೇಹಕ್ಕೋ, ಹೃದಯಕ್ಕೋ?*

ಕರ್ತೃಪದವಾಗಿ ದೇಹಕ್ಕೆ; ಕ್ರಿಯಾಪದವಾಗಿ ಹೃದಯಕ್ಕೆ; ಕರ್ಮ ಪದವಾಗಿ ಮನಸ್ಸಿಗೆ.

## ಬಹುಮಾನಿತ ಪ್ರಶ್ನೆ

ವಿಜಯ, ಮೈಸೂರು

*ಏಳು 'ವಾರ'ಗಳಿರುವ ವಾರಕ್ಕೆ ಒಂದು ವಾರವೆಂದು ಕರೆಯುವುದು ಸರಿಯೆ?*

ರಾಜ್, ಶಮಿ, ಶಶಿ ಹೆಸರಲ್ಲಿ ಕಪೂರ್ ಇರುವಂತೆಯೇ ಇದೂ; ಸೋಮ, ಮಂಗಳಗಳು ವೈಯಕ್ತಿಕ ಹೆಸರುಗಳು; ವಾರ ಫ್ಯಾಮಿಲಿ ನೇಮ್.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಸಾಯಲು ನೂರಾರು ದಾರಿಗಳು. ಬದುಕಲು?*

101, 102, 104, 108 ಅಥವಾ 112ಕ್ಕೆ ಡಯಲ್ ಮಾಡಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ಬಡವರ ಮನೆಯ ಊಟ ಚಂದ; ಶ್ರೀಮಂತನ ಮನೆಯ ನೋಟ ಚಂದ. ರಾಜಕಾರಣಿಗಳ....?*

ಬಾರ್‌ನ ಲೋಟ ಚಂದ.

ಆರತಿ ಘಟಿಕಾರ್, ದುಬೈ

*ಹತ್ತು ತಲೆ ಇರುವ ಪತಿ ರಾವಣನ ತಲೆಯನ್ನು ತಿನ್ನುವುದು ಮಂಡೋದರಿಗೆ ದಡ್ಡ ಸವಾಲಾಗಿರಬೇಕಲ್ಲವೆ?*



ಸವಾಲಲ್ಲ, ಸಂತಸ; ಮೂರುದಿನಕ್ಕೊಂದರಂತೆ ತಿಂಗಳಿಡೀ ತಲೆ ತಿನ್ನುವ ಭಾಗ್ಯ ಯಾರಿಗುಂಟು!

ಹಾಡ್ಯ ಬಿ. ಜಯಾನಂದ, ಮೈಸೂರು

*ಪುರುಷರ ಶಕ್ತಿ ಮಹಿಳೆ ಎನ್ನುತ್ತಾರೆ. ಮಹಿಳೆಯರ ಶಕ್ತಿ ಯಾವುದು?*

ಹೆಣ್ಣಿನ ಬಗ್ಗೆ ಇರುವ ಪುರುಷರ ದೌರ್ಬಲ್ಯ.

ಕೆ.ಯಂ. ವೀರೇಶ್, ಕೂಡ್ಲಿಗಿ

ನಮ್ಮ ಮಾತೃಭಾಷೆಯಲ್ಲಿ 'ಸರಳ ಸುಂದರ' ವಾಕ್ಯ ಯಾವುದು?

ಸರಳಳಿಗೂ ಸುಂದರನಿಗೂ ಹಿರಿಯರ ಸಮಕ್ಷಮ ಪ್ರೇಮವಿವಾಹ ಎಂಬ ವಾಕ್ಯ!

ಎಸ್. ರಾಮಕೃಷ್ಣಾರೆಡ್ಡಿ, ಯಲಹಂಕ

*ಗಂಡ ಹೆಂಡತಿಗೆ ಏಕೆ ಲವ್ ಲೆಟರ್ ಬರೆಯುವುದಿಲ್ಲ?*

'ಎಷ್ಟು ವರ್ಷದಿಂದ ಹೀಗೆ ಬರೀತಿದೀರಾ? ಎಷ್ಟು ಜನಕ್ಕೆ?' ಎಂದೆಲ್ಲಾ ಎನ್‌ಕ್ವೈರಿ ನಡೆಯಬಹುದೆಂಬ ಭಯ.

■ ರಾಮ್